O.S. ನಂಬರಃ 30/2019

ಡಿ. ಡಬ್ಲ್ಯೂಃ 1

ದಿಃ 27-09-2023 ರಂದು ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ವಾದಿ ಪರ ಶ್ರೀ ಎಸ್.ಯು.ಎ. ವಕೀಲರಿಂದಃ

ನಾನು ಎಲ್ಲಾ ಪ್ರತಿವಾದಿಯ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ಸಾಕ್ಷಿ ನುಡಿಯಲು ಎಲ್ಲಾ ಪ್ರತಿವಾದಿಯರು ನನ್ನ ಹೆಸರಿನಲ್ಲಿ ಜಿಪಿಎ ಬರೆದುಕೊಟ್ಟಿಲ್ಲ, ಆದರೆ ಬಾಯಿಮಾತಿನಲ್ಲಿ ಮಾತ್ರ ಅವರ ಪರವಾಗಿ ದಾವೆಯಲ್ಲಿ ಮುಂದುವರೆಯಲು ತಿಳಿಸಿರುತ್ತಾರೆ. ನನ್ನ ತಂದೆ ಬದುಕಿದ್ದಾಗಲೇ ಎಲ್ಲಾ ಮಕ್ಕಳ ಶಿಕ್ಷಣ ಮುಗಿದಿದೆ ಎಂದರೆ ಸರಿ. ನಾವೆಲ್ಲ ಶಿಕ್ಷಣ ಕಲಿಯುತ್ತಿದ್ದಾಗ ನನ್ನ ತಂದೆ ರಾಮನಾಥ ಶೆಟ್ಟಿರವರ ಅಂಗಡಿ ಬಾಡಿಗೆ ಪಡೆದು ಟೇಲರಿಂಗ್ ಹಾಗೂ ಬಟ್ಟೆ ವ್ಯಾಪಾರ ಮಾಡುತ್ತಿದ್ದ. ತದನಂತರ 1976 ರಲ್ಲಿ ಪಟ್ಟಣ ಪಂಚಾಯಿತಿ ನಂಬರ 2414 ನ್ನು ಖರೀದಿಸಿ ಸ್ವಂತ ಅಂಗಡಿಯಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದರು. ಅದರ ಸರ್ವೇ ನಂಬರ 7 ರ ಪೈಕಿ 6/3 ಇದೆ. ಸದರಿ ಆಸ್ತಿ ಅನುಸೂಚಿ ಬ ದಲ್ಲಿ ತೋರಿಸಿದ ಆಸ್ತಿ ಎಂದರೆ ಸರಿ.

ನಮ್ಮೆಲ್ಲರ ಶಿಕ್ಷಣದ ಖರ್ಚನ್ನು ತಂದೆ ನೋಡಿಕೊಂಡಿದ್ದಾನೆ ಎಂದರೆ ಸರಿ. ನಾನು 10 ನೇ ಕ್ಲಾಸನ್ನು ಪಿ.ಎಮ್. ಹೈಸ್ಕೂಲಿನಲ್ಲಿ ಮುಗಿಸಿದ್ದೇನೆ ಎಂದರೆ ಸರಿ. ಪಿಯುಸಿ ಸಲುವಾಗಿ ಜೆಸಿ ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದೇನೆ ಎಂದರೆ ಸರಿ. 1973-74 ರಲ್ಲಿ

ಎಸ್.ಎಸ್.ಎಲ್.ಸಿ. ಮುಗಿದಿದೆ ಎಂದರೆ ಇರಬಹುದು, ನೆನಪಿಲ್ಲ ಎಂದು ಹೇಳುತ್ತಾರೆ. ಪಿಯುಸಿ ಪ್ರಥಮ ವರ್ಷದಲ್ಲಿ ನಾನು ಎಲ್ಲಾ ವಿಷಯಗಳಲ್ಲಿ ಅನುತೀರ್ಣ ಆಗಿದ್ದರಿಂದ ವಿದ್ಯಾಭ್ಯಾಸ ಮುಂದುವರೆಸಿರಲಿಲ್ಲ ಎಂದರೆ ಸರಿ, ಸಾಕ್ಷಿ ನಾನು ಸರಿಯಾಗಿ ವಿದಾಭ್ಯಾಸ ಮಾಡಿರಲಿಲ್ಲ ಮತ್ತು ಆ ಸಮಯದಲ್ಲಿ ತಂದೆ ಅಂಗಡಿ ಖರೀದಿಸಿದ್ದರಿಂದ ಅಲ್ಲಿಯೇ ನನ್ನ ತಂದೆ ಮುಂದುವರೆಸಿದ್ದಾರೆ ಎಂದು ಹೇಳುತ್ತಾರೆ. ನಾನು ಪಿಯುಸಿಯಲ್ಲಿ ಫೇಲಾದ ನಂತರವೇ ನನ್ನ ತಂದೆ ಅಂಗಡಿ ಖರೀದಿಸಿದ್ದಾರೆ ಎಂದರೆ ಸರಿ.

2 ನೇ ಪ್ರತಿವಾದಿ ಮದುವೆ 1984 ರಲ್ಲಿ ಆಗಿದೆ. 1987 ರಲ್ಲಿ 4 ನೇ ಪ್ರತಿವಾದಿಯ ಮದುವೆಯಾಗಿದೆ. 1988 ರಲ್ಲಿ 5 ನೇ ಪ್ರತಿವಾದಿ ಮದುವೆ ಆಗಿದೆ. ಆ ಸಮಯದಲ್ಲಿ ನನ್ನ ತಂದೆ ದುಡಿಯುತ್ತಿದ್ದರು ಎಂದರೆ ಸರಿ. ನನ್ನ ಪ್ರಕಾರ ಆರ್ಯದುರ್ಗಾ ಕ್ಲಾಥ ಸ್ಟೋರನ್ನು ಮೂಲವಾಗಿ ನನ್ನ ತಂದೆ ಪ್ರಾರಂಭಿಸಿದ್ದಾರೆ ಎಂದರೆ ಸರಿ. ಸದರಿ ಕ್ಲಾಥ್ ಸ್ಟೋರನ್ನು 1976 ರಲ್ಲಿ ಪ್ರಾರಂಭಿಸಲಾಗಿದೆ. 1976 ರಲ್ಲಿ ನನ್ನ ತಂದೆ ಅಂಗಡಿ ಪ್ರಾರಂಭಿಸುವ ಸಮಯದಲ್ಲಿ ನನ್ನ ತಂದೆಯ ಸಹೋದರರು ಮತ್ತು ಸಹೋದರಿಯರು ಅಂಕೋಲಾ ಬಿಟ್ಟು ಬೇರೆ ಬೇರೆ ಸ್ಥಳಗಳಲ್ಲಿ ವಾಸಿಸುತ್ತಿದ್ದರು ಎಂದರೆ ಸರಿ. ಅನುಸೂಚಿ ಬ ಆಸ್ತಿಯ ಖರೀದಿ ಪತ್ರ ನನ್ನ ಬಳಿ ಇದೆ ಎಂದರೆ ಕಳೆದುಹೋಗಿದೆ ಎಂದು ಹೇಳುತ್ತಾರೆ. ಸದರಿ ದಾಖಲೆಯ ದೃಡೀಕೃತ ಪ್ರತಿಯನ್ನು ನೋಂದಣಿ ಕಚೇರಿಯಿಂದ ಪಡೆಯಲಾಗಿದೆ. ದೃಡೀಕೃತ ಪ್ರತಿಯನ್ನು ನನ್ನ ಪರವಾಗಿ ಹಾಜರುಪಡಿಸಿದ ಬಗ್ಗೆ ಮಾಹಿತಿ ಇಲ್ಲ. ಅನುಸೂಚಿ ಬ ಆಸ್ತಿಯನ್ನು ಬಾಳಕೃಷ್ಣ ಶೆಟ್ಟಿರವರಿಂದ ಖರೀದಿಸಲಾಗಿದೆ.

ನನ್ನ ತಂದೆ ಮೃತಪಟ್ಟ ನಂತರ ನಿಡಿ–13 ದಾಖಲೆಗೆ ಎಲ್ಲ ವಾರಸುದಾರರ ಹೆಸರು ಬರದೇ ನನ್ನೊಬ್ಬನ ಹೆಸರು ಮಾತ್ರ ದಾಖಲಾಗಿದೆ ಎಂದರೆ ತಾಯಿ ಹಾಗೂ ಸಹೋದರರು ಸೇರಿ ನನ್ನ ಹೆಸರು ಮಾತ್ರ ದಾಖಲಿಸಲು ನೀಡಿರುತ್ತಾರೆ ಎಂದು ಹೇಳುತ್ತಾರೆ. ನಿಡಿ–13 ಕ್ಕೆ ನನ್ನೊಬ್ಬನ ಇಚ್ಛೆಯಂತೆ ಮಾತ್ರ ಹೆಸರು ದಾಖಲಿಸಿಕೊಂಡಿದ್ದೇನೆ, ಅದಕ್ಕೆ ವಾದಿ ಸಮ್ಮತಿಸಿಲ್ಲ ಎಂದರೆ ಸರಿಯಲ್ಲ. ನಿಡಿ–13 ಕ್ಕೆ ನನ್ನೊಬ್ಬನ ಹೆಸರು ದಾಖಲಿಸಲು ವಾದಿ ಸಮ್ಮತಿ ನೀಡಿದ ಬಗ್ಗೆ ದಾಖಲೆ ಇಲ್ಲ ಎಂದರೆ ಸಾಕ್ಷಿ, ಎಲ್ಲರೂ ಸೇರಿ ಮಾಡಿಕೊಟ್ಟಿದ್ದಾರೆ ಅದಕ್ಕೆ ದಾಖಲೆ ಕೇಳಿಲ್ಲ ಮತ್ತು ಅವರು ಕೊಟ್ಟಿಲ್ಲ ಎಂದು ಹೇಳುತ್ತಾರೆ.

ನಿಡಿ–13 ಕ್ಕೆ ನನ್ನೊಬ್ಬನ ಹೆಸರು ಹಾಕಲು ಲೇಬರ್ ಇನ್ಸಪೆಕ್ಟರ ಸಹಿ ಪಡೆದಿರಬಹುದು, ಈಗ ಅದು ನನ್ನ ಬಳಿ ಇಲ್ಲ ಎಂದು ಹೇಳುತ್ತಾರೆ. ವಾದಿ ಸಮ್ಮತಿಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆರ್ಯದುರ್ಗಾ ಕ್ಲಾಥ್ ಸ್ಟೋರ್ ವ್ಯವಹಾರದಿಂದ ಆದ ಲಾಭದ ವಿವರವನ್ನು ಮೊದಲು ತಂದೆ ನೋಡಿಕೊಳ್ಳುತ್ತಿದ್ದ, ನಂತರ ತಾಯಿ ನೋಡಿಕೊಳ್ಳುತ್ತಿದ್ದರು, ಆ ಕುರಿತು ನನ್ನ ಬಳಿ ದಾಖಲೆ ಕಾಯ್ದಿಟ್ಟಿಲ್ಲ ಎಂದು ಹೇಳುತ್ತಾರೆ. ಅಂಗಡಿ ವ್ಯವಹಾರದ ಕುರಿತು ಬಟ್ಟೆ ಖರೀದಿಸಿದ ಬಗ್ಗೆ ಹಾಗೂ ಮಾರಾಟ ಮಾಡಿದ ಬಗ್ಗೆ ದಾಖಲೆ ಕಾಯ್ದಿಟ್ಟಿಲ್ಲ ಎಂದರೆ ಸಾಕ್ಷಿ, 2012 ರಲ್ಲಿ ವ್ಯವಹಾರ ಬಂದ್ ಮಾಡಿದ್ದರಿಂದ ಆವಾಗಲೇ ಸೇಲ್ಸ ಟ್ಯಾಕ್ಸ ಕಚೇರಿಗೆ ವಕೀಲರ ಮುಖಾಂತರ ಸಲ್ಲಿಸಿದ್ದು, ಕಚೇರಿಯ ಫೈಲ್ ನನ್ನ ಬಳಿ ಇದೆಯೋ ನೋಡಬೇಕು ಎಂದು ಹೇಳುತ್ತಾರೆ. ಸೇಲ್ಸ ಟ್ಯಾಕ್ಸ ಕಚೇರಿ ಇನ್ನು ಇದೆ ಎಂದರೆ ಸರಿ. ಸದರಿ ಕಚೇರಿಯಿಂದ ಬಟ್ಟೆ ಅಂಗಡಿ ವ್ಯವಹಾರದ ಕುರಿತು ಇರುವ ದಾಖಲೆ

ಪಡೆಯಲು ತೊಂದರೆ ಇಲ್ಲ ಎಂದರೆ ಹೋದರೂ ಸಹ ದೊರೆಯುವುದಿಲ್ಲವೆಂದು ಹೇಳುತ್ತಾರೆ. ನಾನು ಆ ಕುರಿತು ಪ್ರಯತ್ನಿಸಲು ಅರ್ಜಿ ನೀಡಿಲ್ಲ ಎಂದರೆ ಸರಿ. ಬಟ್ಟೆಯ ವ್ಯಾಪಾರದ ಅಂಗಡಿ ಬಹಳ ಲಾಭದಿಂದ ಕೂಡಿತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ.

ನನ್ನ ತಂದೆಯ ತಂದೆ ಹೆಸರು ರಾಮಚಂದ್ರ ಕೃಷ್ಣ ಶೆಟ್ಟಿ, ತಾಯಿ ಹೆಸರು ಸೀತಾಬಾಯಿ ರಾಮಚಂದ್ರ ಶೆಟ್ಟಿ ಸದರಿ ಸೀತಾಬಾಯಿ ಮೂಲದಾವೆ ನಂ. 23/1983 ಎಂದು ನನ್ನ ತಂದೆ ಹಾಗೂ ಉಳಿದ ತನ್ನ ಮಕ್ಕಳ ಮೇಲೆ ಸಲ್ಲಿಸಿದ್ದಳು ಅದರಲ್ಲಿ ಈ ದಾವೆಯ ಅನುಸೂಚಿ ಬ ಆಸ್ತಿ ಇದೆ ಎಂದರೆ ಮಾಹಿತಿ ಇಲ್ಲ. ಈ ದಾವೆಯಲ್ಲಿ ನನ್ನ ಪರ ಸಲ್ಲಿಸಿದ ಪ್ರತಿವಾದ ಪತ್ರದಲ್ಲಿ ಮೂಲದಾವೆ ನಂ. 23/1983 ಕುರಿತು ಬರೆಯಲಾಗಿದೆ ಎಂದರೆ ಮಾಹಿತಿ ಇಲ್ಲ. ನನಗೆ ಇಂಗ್ಲೀಷ್ ಬರುವುದಿಲ್ಲವೆಂದರೆ ಸರಿ. ನಮ್ಮ ಪರ ಸಲ್ಲಿಸಿದ ಪ್ರತಿವಾದ ಪತ್ರ ಇಂಗ್ಲೀಷನಲ್ಲಿದ್ದು, ಅದರ ಬಗ್ಗೆ ಅಷ್ಟೊಂದು ಮಾಹಿತಿ ಆಗುವುದಿಲ್ಲ. ಸೀತಾಬಾಯಿ ರಾಮಚಂದ್ರ ಶೆಟ್ಟಿರವರು ಸಲ್ಲಿಸಿದ ಮೂಲ ದಾವೆ ನಂ. 23/1983 ರಲ್ಲಿ ತನ್ನ ಗಂಡ ಸರ್ವೇ ನಂ. 7ರ ಪೈಕಿ 6/3 ರಲ್ಲಿ ನಡೆಸಿಕೊಂಡು ಹೋಗುತ್ತಿದ್ದ ಬಟ್ಟೆ ಅಂಗಡಿಯನ್ನು ನನ್ನ ತಂದೆ ಮುಂದುವರೆಸಿದ ಬಗ್ಗೆ ಬರೆಯಲಾಗಿದೆ ಎಂದರೆ ಮಾಹಿತಿ ಇಲ್ಲ, ಸಾಕ್ಷಿ ನನ್ನ ಅಜ್ಜ ಟೇಲರಿಂಗ್ ಅಷ್ಟೇ ಮಾಡುತ್ತಿದ್ದ ಎಂದು ಹೇಳುತ್ತಾರೆ.

ಸದರಿ ಕ್ಲಾಥ್ ಹಾಗೂ ಟೇಲರಿಂಗ್ ಅಂಗಡಿಯನ್ನು ನನ್ನ ತಂದೆ ಮಾತ್ರ ಕುಟುಂಬದ ವತಿಯಿಂದ ನಡೆಸಿಕೊಂಡು ಬಂದಿದ್ದು, ಉಳಿದ ಮಕ್ಕಳು ಅಂಕೋಲಾ

ಬಿಟ್ಟು ಬೇರೆ ಬೇರೆ ಸ್ಥಳಗಳಲ್ಲಿ ವಾಸ್ತವ್ಯವಿದ್ದಾರೆಂದು ಮೂಲದಾವೆ ನಂ. 23/1983 ರಲ್ಲಿ ಬರೆದಿತ್ತು ಎಂದರೆ ಏನೇನು ಬರೆದುಕೊಂಡಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಮೂಲದಾವೆ ನಂ. 23/1983 ಚಾಲ್ತಿಯಲ್ಲಿದ್ದಾಗ ನನ್ನ ತಂದೆ ಆರೋಗ್ಯವಾಗಿದ್ದರು ಎಂದರೆ ಸರಿ. ಟೇಲರಿಂಗ್ ಕೆಲಸಕ್ಕಾಗಿ ನನ್ನ ತಂದೆ ಎರಡು ಜನರನ್ನು ನೇಮಿಸಿಕೊಂಡಿದ್ದರು. ನನ್ನ ತಂದೆಗೆ ಟೇಲರಿಂಗ್ ನಿಂದ ಎಷ್ಟು ಆದಾಯ ಬರುತ್ತಿತ್ತು ಎಂದು ಲೆಕ್ಕಪತ್ರ ಇಟ್ಟಿಲ್ಲ. ನನ್ನ ತಂದೆ ನಡೆಸುತ್ತಿದ್ದ ಜವಳಿ ಅಂಗಡಿ ಮೇಲೆ A-1 ಎಂಬುವ ಟೇಲರಿಂಗ್ ಅಂಗಡಿ ಬಾಡಿಗೆಗೆ ಇತ್ತು ಎಂದರೆ ಸರಿ. A-1 ಟೇಲರಿಂಗ್ ಅಂಗಡಿ ಬಾಡಿಗೆ ಎಷ್ಟು ವರ್ಷದವರೆಗೆ ಇತ್ತು ಎಂದು ಈಗ ಹೇಳಲು ಬರುವುದಿಲ್ಲ. ಸದರಿ ಬಾಡಿಗೆ ಹಣವನ್ನು ತಂದೆ ಸಮಯದಲ್ಲಿ ಆತ ಪಡೆಯುತ್ತಿದ್ದು, ಆತನ ಮರಣದ ನಂತರ ನನ್ನ ತಾಯಿ ಪಡೆಯುತ್ತಿದ್ದರು. ಜವಳಿ ಅಂಗಡಿಯಿಂದ ಬಂದ ಆದಾಯದ ಕುರಿತು ನಮ್ಮ ತಾಯಿಗೆ ನಾವ್ಯಾರು ಕೇಳಿಲ್ಲ. ಅವಶ್ಯಕತೆ ಇದ್ದರೆ ಖರ್ಚನ್ನು ತಾಯಿ ನೋಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ.

ಕೆ.ಐ.ಸಿ.ಬಿ. ಲಿಮಿಟೆಡ್ ಶಾಖೆ ಅಂಕೋಲಾ ಹಣಕಾಸು ಸಂಸ್ಥೆಯಲ್ಲಿ ತಂದೆ ಸಾಲ ಪಡೆದ ಕುರಿತು ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಗ್ಗೆ ಮಾಹಿತಿ ಇಲ್ಲ. ಸದರಿ ಲೋನನ್ನು ಅಂಗಡಿ ಲಾಭದಲ್ಲಿ ತಂದೆ ತೀರಿಸಿರುತ್ತಾರೆ. ಕೆಡಿಸಿಸಿ ಬ್ಯಾಂಕಿನಲ್ಲಿ ಲೋನ್ ಮಾಡಿಲ್ಲ, ಆದರೆ ಓ.ಡಿ. ಸೌಲಭ್ಯ ಪಡೆದಿದ್ದು, ಅದನ್ನು ಯಾವಾಗ ಪಡೆಯಲಾಗಿದೆ ಎಂದು ಮಾಹಿತಿ ಇಲ್ಲ, ಅದು ಮೊದಲು ತಂದೆಯವರ ಹೆಸರಿನಲ್ಲಿತ್ತು ಎಂದು ಹೇಳುತ್ತಾರೆ. ಯಾವ ಉದ್ದೇಶಕ್ಕಾಗಿ ಓಡಿ ಸೌಲಭ್ಯ ಪಡೆಯಲಾಗಿದೆ ಎಂದು ಬ್ಯಾಂಕಿನಲ್ಲಿ ನಮೂದು

ಇರುತ್ತದೆ ಎಂದರೆ ಸರಿ. ಸದರಿ ಓಡಿ ಸೌಲಭ್ಯದಡಿ ಪಡೆದ ಹಣವನ್ನು ವಾದಿ ಹಾಗೂ ನಾವೆಲ್ಲ ಸಹೋದರ-ಸಹೋದರಿಯರು ಸೇರಿ ತುಂಬಿ 2012 ರಲ್ಲಿ ತಿರುವಳಿ ಮಾಡಿಕೊಂಡಿದ್ದೇವೆ. ಕೆಡಿಸಿಸಿ ಬ್ಯಾಂಕಿನಲ್ಲಿ ಇದ್ದ ಓಡಿ ಸಾಲ ನನ್ನ ವೈಯಕ್ತಿಕ ಎಂದರೆ ಸರಿಯಲ್ಲ. ಅವುಗಳ ದಾಖಲಾತಿ ಹಾಜರುಪಡಿಸಿದ್ದರೆ ಆ ಕುರಿತು ಗೊತ್ತಾಗುತ್ತದೆ ಎಂದು ಕೆ.ಐ.ಸಿ.ಬಿ. ಲಿಮಿಟೆಡ್ ಶಾಖೆ ಅಂಕೋಲಾ ಹಾಗೂ ಕೆಡಿಸಿಸಿ ಬ್ಯಾಂಕಿನ ಸಾಲದ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಅವಧಿ ಮುಕ್ತಾಯಗೊಂಡಿದ್ದರಿಂದ ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.

O.S. ನಂಬರಃ 30/2019

ಡಿ. ಡಬ್ಲ್ಯೂಃ 1

ದಿಃ 27-09-2023 ರಂದು ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ  ವಾದಿ ಪರ ಶ್ರೀ  ಎಸ್.ಯು.ಎ. ವಕೀಲರಿಂದಃ

ನಮ್ಮ ತಂದೆ ಬದುಕಿದ್ದಾಗ ನನ್ನ ಖರ್ಚಿಗೆಂದು ಪ್ರತ್ಯೇಕ ಹಣ ನೀಡುತ್ತಿರಲಿಲ್ಲ, ಅವಶ್ಯಕತೆ ಇದ್ದಾಗ ಕೇಳಿ ಪಡೆಯಬೇಕಾಗಿತ್ತು. ಉಳಿದ ಮಕ್ಕಳಿಗೂ ಸಹ ಅದೇ ರೀತಿ ವ್ಯವಸ್ಥೆ ಇತ್ತು. ನನ್ನ ತಂದೆ ಮೃತಪಟ್ಟ ನಂತರ ತಾಯಿಯ ಬಳಿಯೂ ಸಹ ಅವಶ್ಯಕತೆ ಇದ್ದ ಹಣವನ್ನು ಕೇಳಿ ಪಡೆಯುತ್ತಿದ್ದೇವು. ವಾದಿಯು ಕುಟುಂಬದ ಯಾವುದೇ ಆಸ್ತಿಗಳಲ್ಲಿ 12-ವರ್ಷಗಳಿಂದ ವಹಿವಾಟಿ ಮಾಡಿಲ್ಲವೆಂದು ಪ್ರತಿವಾದ ಪತ್ರದ 2 ನೇ ಖಂಡಿಕೆಯಲ್ಲಿ ಬರೆಯಲಾಗಿದೆ ಎಂದರೆ ನೆನಪಿಲ್ಲ.

ಪ್ರತಿವಾದಿ ನಂ. 7 ರಿಂದ 9 ರವರ ಪರಿಚಯ ಇದೆ. ಈ ಮೊದಲು ಇದ್ದ ಬಟ್ಟೆ ಅಂಗಡಿಯನ್ನು ಬಾಡಿಗೆಗೆ ನೀಡಿದ್ದು, 7 ನೇ ಪ್ರತಿವಾದಿ ಕೆಳಭಾಗದ ಕಟ್ಟಡದಲ್ಲಿ ಹಾಗೂ 8 ನೇ ಪ್ರತಿವಾದಿ ಮೇಲ್ಭಾಗದ ಕಟ್ಟಡದಲ್ಲಿ ಹಾಗೂ 9 ನೇ ಪ್ರತಿವಾದಿ ಸದರಿ ಕಟ್ಟಡದ ಹಿಂಬದಿ ಇರುವ ಇಮಾರತ್ತಿನಲ್ಲಿ ಬಾಡಿಗೆಗೆ ಇದ್ದಾರೆ. ಸಾಕ್ಷಿ ಭಾವಚಿತ್ರ ನೋಡಿ ಎ.ಕೆ.ಸ್ಟೀಲ್ ಎಂಬುವ ನಾಮೆ ಅಂಗಡಿ ಕೆಳಭಾಗದ ಅಂಗಡಿಯಿದ್ದು, ಅದರಲ್ಲಿ 7 ನೇ ಪ್ರತಿವಾದಿ ಬಾಡಿಗೆ ಇದ್ದಾನೆ, ಇನ್ನೊಂದು ಭಾವಚಿತ್ರದಲ್ಲಿ ಇದು ಮೇಲಿನ ಅಂಗಡಿ ಎಂದು ತಿಳಿಸಿದ್ದು,

ಅವುಗಳನ್ನು ಕ್ರಮವಾಗಿ ನಿಪಿ–28 ಮತ್ತು 29 ಹಾಗೂ ಅದರ ಸಿಡಿಯನ್ನು ನಿಪಿ–30 ಎಂದು ಗುರುತಿಸಲಾಯಿತು. ಸದರಿ ಅಂಗಡಿಗಳಿಗೆ ಬಾಡಿಗೆ ಕರಾರು ಇದೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ, ತಾಯಿಯವರಿಗೆ ಮಾಹಿತಿ ಇದೆ ಎಂದು ಹೇಳುತ್ತಾರೆ. ಈ ಕುರಿತು ತಾಯಿಯವರ ಬಳಿ ಮಾಹಿತಿ ಕೇಳಿದ್ದೀರಾ ಎಂದರೆ ಎಲ್ಲವನೂ ಕೇಳುವುದಿಲ್ಲ ಎಂದು ಹೇಳುತ್ತಾರೆ. ನನ್ನ ಪ್ರಕಾರ ಸದರಿ ಅಂಗಡಿಗಳ ವ್ಯವಹಾರವನ್ನು ತಾಯಿ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ.

ಪ್ರತಿದಿನದ ಕೆಳಭಾಗದ ಅಂಗಡಿ ಬಾಡಿಗೆಯನ್ನು ನಾನು ಪಡೆಯುತ್ತಿದ್ದೇನೆ, ಹಾಗೂ ಮೇಲ್ಭಾಗದ ಅಂಗಡಿ ಬಾಡಿಗೆಯನ್ನು 6 ನೇ ಪ್ರತಿವಾದಿ ಪಡೆಯುತ್ತಿದ್ದಾನೆ ಎಂದರೆ ಸರಿಯಲ್ಲ. 7 ಮತ್ತು 8 ನೇ ಪ್ರತಿವಾದಿ 2012 ರಿಂದಲೇ ಬಾಡಿಗೆ ಇದ್ದಾರೆ. ಪ್ರತಿದಿನ ನಾನು ಹಾಗೂ 6 ನೇ ಪ್ರತಿವಾದಿ ತಲಾ 800/–ರೂ ಬಾಡಿಗೆ ಪಡೆಯುತ್ತಿದ್ದೇವೆ ಎಂದರೆ ಸರಿಯಲ್ಲ. 2012 ರಲ್ಲಿ ನನಗಿದ್ದ ವೈಯಕ್ತಿಕ ಸಾಲವನ್ನು 7 ನೇ ಪ್ರತಿವಾದಿ ನೀಡಿದ 6 ಲಕ್ಷ ಮುಂಗಡ ಹಣದಲ್ಲಿ ತೀರಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿ ಮುಂಗಡ ಹಣಕ್ಕೆ ಸಂಬಂಧಿಸಿದಂತೆ ನನ್ನ ಹೆಸರಿನ ಬ್ಯಾಂಕ ಅಂಕೌಂಟಿಗೆ ವರ್ಗಾಯಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡಬೇಕೆಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

7 ಮತ್ತು 8 ನೇ ಪ್ರತಿವಾದಿಯರು ಬಾಡಿಗೆಗೆ ಇದ್ದ ಜಾಗೆ ಮುಖ್ಯ ಮಾರುಕಟ್ಟೆಗೆ ತಾಗಿದೆ ಎಂದರೆ ಸರಿ. ವೈನಶಾಪ್ ನಡೆಸಲು ನೀಡಿದ ಜಾಗೆ 7 ಮತ್ತು 8 ಪ್ರತಿವಾದಿಯರಿಗೆ

ಬಾಡಿಗೆಗೆ ನೀಡಿದ ಅಂಗಡಿ ಹಿಂಬದಿಯ ಸಂದಿಯಲ್ಲಿದೆ ಎಂದರೆ ಸರಿ. ಸದರಿ ವೈನ್ ಶಾಪ್ ಹೆಸರು ಗೋಲ್ಡನ್ ಎಂದು ಇದ್ದು, ಅದನ್ನು ನಡೆಸಲು ತದಡಿಯ ಈಶ್ವರ ಬೀರಪ್ಪ ನಾಯ್ಕ ರವರ ಹೆಸರಿನಲ್ಲಿ ಪರವಾನಿಗೆ ಇರುತ್ತದೆ ಎಂದರೆ ಸರಿ, ಸಾಕ್ಷಿ ಅದನ್ನು ವೀಣಾ ನಾಗಪ್ಪ ನಾಯ್ಕ ರವರು ನಡೆಸಿಕೊಂಡು ಹೋಗುತ್ತಿದ್ದರು ಎಂದು ಹೇಳುತ್ತಾರೆ. ಸದರಿ ವೈನ್ ಶಾಪ್ ಅಂಗಡಿಗಾಗಿ 2011 ರಲ್ಲಿ ಬಾಡಿಗಾಗಿ ನೀಡಿದ್ದು, ಮೊದಲು ತಾಯಿ ಬಾಡಿಗೆಯನ್ನು ಪಡೆಯುತ್ತಿದ್ದು, ಒಂದು–ಒಂದುವರೆ ವರ್ಷ ಆದ ನಂತರ ವಾದಿ ಕುಟುಂಬದ ಮನೆ ಸಾಲ ತೀರಿಸಲೆಂದು ಪ್ರತಿ ತಿಂಗಳು 12,000/– ನೀಡುತ್ತಿದ್ದ ಬಾಡಿಗೆ ಪಡೆಯುತ್ತಾ ಬಂದಿರುತ್ತಾನೆ ಎಂದು ಹೇಳುತ್ತಾರೆ. 7 ಮತ್ತು 8 ನೇ ಪ್ರತಿವಾದಿಯರು ನೀಡುವ ಬಾಡಿಗೆ ಬಗ್ಗೆ ಗೊತ್ತಿಲ್ಲ, ಆದರೆ ವೈನ್ ಶಾಪ್ ಸಂಬಂಧ ಬಾಡಿಗೆ ಹಣ ಮಾತ್ರ ಕರಾರುವಕ್ಕಾಗಿ ಗೊತ್ತಿದೆ ಎಂದರೆ ಸಾಕ್ಷಿ ವೀಣಾ ನಾಗಪ್ಪ ನಾಯ್ಕ ರವರು ಹೇಳಿದ್ದರಿಂದ ಗೊತ್ತಾಗಿದೆ ಎಂದು ಹೇಳುತ್ತಾರೆ. ವೀಣಾ ನಾಗಪ್ಪ ನಾಯ್ಕ ಯಾವತ್ತಿಗೂ ವೈನ್ ಶಾಪ್ ನಡೆಸಿಲ್ಲ, ಈಶ್ವರ ಬೀರಪ್ಪ ನಾಯಕ ರವರೇ ವೈನ್ ಶಾಪ್ ನಡೆಸುತ್ತಿದ್ದರು ಎಂದರೆ ಸರಿಯಲ್ಲ.

ವೈನ್ ಶಾಪಿಗೆ ಬಾಡಿಗೆ ಕರಾರು ಪತ್ರವನ್ನು ಅಬಕಾರಿ ಕಚೇರಿಗೆ ನೀಡಬೇಕಾಗುತ್ತದೆ ಎಂದರೆ ಸರಿ. ಸದರಿ ಕರಾರು ಪತ್ರದಲ್ಲಿ ನಾನು ಸಹಿ ಮಾಡಿದ ಬಗ್ಗೆ ನನಗೆ ನೆನಪಿಲ್ಲ. ಈಗ ನೋಡುತ್ತಿರುವ ಬಾಡಿಗೆ ಕರಾರು ಪತ್ರಗಳಲ್ಲಿ ನನ್ನ ಸಹಿ ಇದೆ, ಸದರಿ ದಾಖಲೆಗಳು ಬಾಡಿಗೆ ಕರಾರು ಪತ್ರಗಳಿದ್ದು, ಅವುಗಳನ್ನು ನಿಪಿ–31 ರಿಂದ 37, ಸಾಕ್ಷಿ ಸಹಿಗಳನ್ನು ನಿಪಿ–31 ಎ ದಿಂದ 36 ಎ ಎಂದು ಗುರುತಿಸಲಾಯಿತು. ಸದರಿ ವೈನ್ ಶಾಪ್ ಅಂದಾಜು 4–5

ವರ್ಷಗಳ ಹಿಂದೆ ಬಂದಾಗಿದೆ. ವೈನ್ ಶಾಪ್ ನವರು ಪ್ರತಿ ತಿಂಗಳು ರೂ. 12,000/- ಬಾಡಿಗೆ ನೀಡುತ್ತಿದ್ದರೆಂದು ನನ್ನ ಬಾಯಿ ಮಾತಿನ ಸಾಕ್ಷಿ ಬಿಟ್ಟರೆ ಬೇರೆ ದಾಖಲೆ ಇಲ್ಲ ಎಂದರೆ ಸರಿ. ಪ್ರತಿವಾದ ಪತ್ರ ಬರೆಸುವಾಗ ವೈನ್ ಶಾಪ್ ಸಂಬಂಧ ಬಾಡಿಗೆ ಕುರಿತು ಅಬಕಾರಿ ಇಲಾಖೆಗೆ ಅರ್ಜಿ ನೀಡಿ ಮಾಹಿತಿ ಪಡೆದಿಲ್ಲ.

9 ನೇ ಪ್ರತಿವಾದಿ ಬಾಡಿಗೆ ಕರಾರನ್ನು ವಾದಿ ಜೊತೆ ಮಾಡಿಕೊಂಡಿದ್ದು, ಅದಕ್ಕೆ ಬಾಂಡ್ ಬರೆದಿಲ್ಲ. ಸದರಿ ಬಾಡಿಗೆ ಹಣ ಎಷ್ಟಿದೆ ಎಂದು ಮಾಹಿತಿ ಇಲ್ಲ, ಅದನ್ನು ವಾದಿ ಪಡೆಯುತ್ತಿದ್ದನು. ಸದರಿ ಅಂಗಡಿ 14x10 ಅಡಿ ವಿಸ್ತೀರ್ಣ ಇದೆ. 9 ನೇ ಪ್ರತಿವಾದಿಗೆ ನೀಡಿದ ಅಂಗಡಿ ಬಾಡಿಗೆಯನ್ನೂ ಸಹ ನಾನು ಹಾಗೂ 6 ನೇ ಪ್ರತಿವಾದಿ ಹಂಚಿಕೊಳ್ಳುತ್ತಿದ್ದೇವು ಎಂದರೆ ಸರಿಯಲ್ಲ. 9 ನೇ ಪ್ರತಿವಾದಿ ಸದರಿ ಅಂಗಡಿಯಲ್ಲಿ ಉಳಿಯುವ ಮೊದಲು ಸರ್ಕಾರದ ಸಾರಾಯಿ ಅಂಗಡಿ ಇತ್ತು ಎಂದರೆ ಸರಿ. ಸರ್ಕಾರದ ಸಾರಾಯಿ ಅಂಗಡಿ ಕುರಿತಾಗಿ ಬಾಡಿಗೆ ಕರಾರನ್ನು ತಾಯಿ ಮಾಡಿಕೊಂಡಿದ್ದರು. ಅಂದಾಜು 6-7 ವರ್ಷ ಸದರಿ ಸಾರಾಯಿ ಅಂಗಡಿ ಇದ್ದು, ಎಷ್ಟು ಬಾಡಿಗೆ ಇತ್ತು ಎಂದು ನೆನಪಿಲ್ಲ.

(ಮುಂದುವರೆದ ಪಾಟಿ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.